# ಸಂಸತ್ತಿನ ಸದನದಲ್ಲಿ ಮೇನಕಾ ಸದ್ದು!

ರಾಘವೇಂದ್ರ ಕೆ. ತೊಗರ್ಸಿ



ಲಿಂಗ ಅಸಮಾನತೆ ಅಳಿಸಲು ಬದಲಾವಣೆಯ ಗಾಳಿ ಬೀಸುತ್ತಿದ್ದಂತಿದೆ. ನೇಪಾಳದ ಸಂಸತ್ತಿಗೆ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಭೂಮಿಕಾ ಶ್ರೇಷ್ಠ ಆಯ್ಕೆಯಾಗಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗೆ ಹೋರಾಡುವ ಪ್ರಮುಖ ಹೋರಾಟಗಾರ್ತಿ ಅವರು. ಇದೇ ಹೊತ್ತಿಗೆ ಸರಿಯಾಗಿ ಭಾರತದಲ್ಲಿ ಮೊದಲ ಬಾರಿಗೆ ಸಲಿಂಗಿ ಆಯ್ಕೆ ಇರುವ ಮಹಿಳೆ ಸಂಸತ್ತಿಗೆ ಪ್ರವೇಶಿಸುತ್ತಿದ್ದಾರೆ.

ಮೇನಕಾ ಗುರುಸ್ವಾಮಿ ಪಶ್ಚಿಮ ಬಂಗಾಳ ವಿಧಾನಸಭೆಯಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗಿ ಇತಿಹಾಸ ನಿರ್ಮಿಸಿದ್ದಾರೆ. ಸ್ವತಂತ್ರ ಭಾರತದ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಲೆಸ್ಬಿಯನ್ (ಸಲಿಂಗಿ ಆಯ್ಕೆಯ ಮಹಿಳೆ) ಒಬ್ಬರ ಮೇಲ್ಮನೆ ಪ್ರವೇಶ ವ್ಯಕ್ತಿ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಹಕ್ಕಿನ ಘನತೆಗೆ ದಕ್ಕಿದ ಗೌರವದಂತೆ ಗೋಚರಿಸುತ್ತಿದೆ.

ವೃತ್ತಿಯಿಂದ ವಕೀಲೆ ಆಗಿರುವ ಮೇನಕಾ ಗುರುಸ್ವಾಮಿ ಸಲಿಂಗಕಾಮ ಅಪರಾಧವೆಂದು ಪರಿಗಣಿಸಿರುವ ಹಿಂದಿನ ಐಪಿಸಿ ಸೆಕ್ಷನ್ 377 ವಜಾಗೊಳಿಸಲು ಸುಪ್ರೀಂಕೋರ್ಟ್‌ನಲ್ಲಿ ತಮ್ಮ ಅಹವಾಲು ಮಂಡಿಸಿದ್ದರು. ಸಲಿಂಗಕಾಮ ವಯಸ್ಕ ಜೋಡಿಯ ವೈಯಕ್ತಿಕ ಆಯ್ಕೆಯೇ ಹೊರತು ಅಪರಾಧ ಅಲ್ಲ ಎನ್ನುವ ತಮ್ಮ ವಾದವನ್ನು ಮಂಡಿಸಿದ್ದರು. ಮದ್ಯನೀತಿಯಲ್ಲಿ ಅವ್ಯವಹಾರವಾಗಿದೆ ಎನ್ನುವ ಆರೋಪ ಎದುರಿಸುತ್ತಿದ್ದ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮತ್ತು ಮಾಜಿ ಸಚಿವ ಮನೀಶ್ ಸಿಸೋಡಿಯಾ ಅವರ ಪರವಾಗಿ ಸಿಬಿಐ ನ್ಯಾಯಾಲಯದಲ್ಲಿ ವಾದಮಂಡಿಸಿ, ಆ ಪ್ರಕರಣದಿಂದ ಅವರನ್ನು ಇತ್ತೀಚೆಗೆ ಆರೋಪ ಮುಕ್ತಗೊಳಿಸಿದ್ದರು.

ವಿಧಾನಸಭೆ ಮತ್ತು ಲೋಕಸಭೆಗೆ ಮಹಿಳಾ ಮೀಸಲು ಮಸೂದೆ ಮೂರು ದಶಕದಿಂದ ನನೆಗುದಿಗೆ ಬಿದ್ದಿತ್ತು. ಇತ್ತೀಚೆಗೆ ಆ ಮಸೂದೆಯನ್ನು ಸಂಸತ್ತು ಅಂಗೀಕರಿಸಿದ್ದು ಕಾನೂನು ಅನುಷ್ಠಾನ ಬಾಕಿ ಇರುವಾಗಲೇ ಮೇನಕಾ ರಾಜ್ಯಸಭೆಯ ಪ್ರವೇಶ ಇನ್ನೂ ಮಹತ್ವವನ್ನು ಪಡೆದಿದೆ. ಲಿಂಗತ್ವ ಸ್ವಯಂ ಘೋಷಣೆಯ ಹಕ್ಕಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿರುವ ಲಿಂಗತ್ವ ಅಲ್ಪ ಸಂಖ್ಯಾತರ ಹಕ್ಕುಗಳಿಗೆ ಸಂಬಂಧಿಸಿದ ತಿದ್ದುಪಡಿ ಮಸೂದೆಗೆ ಲಿಂಗತ್ವ ಅಲ್ಪಸಂಖ್ಯಾತ ವಲಯದಿಂದ ವಿರೋಧ ವ್ಯಕ್ತವಾಗಿರುವ ಸಂದರ್ಭದಲ್ಲಿ ಅವರ ಆಯ್ಕೆಯ ಮಹತ್ವವನ್ನು ಮತ್ತೂ ಹೆಚ್ಚಿಸಿದೆ.

ಮೇನಕಾ ಅವರು 1997ರಿಂದ ವಕೀಲಿ ವೃತ್ತಿಯನ್ನು ಆರಂಭಿಸಿದ್ದಾರೆ. ಜಗತ್ತಿನ ಪ್ರತಿಷ್ಠಿತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಫಿಲಾಸಫಿ (ಡಿ.ಫಿಲ್) ಪದವಿಯನ್ನು ಪಡೆದಿದ್ದಾರೆ. ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ರೋಡ್ಸ್ ಸ್ಕಾಲರ್ ಮತ್ತು ಗ್ಯಾಮ್ಮನ್ ಫೆಲೊಶಿಪ್ ಪಡೆದಿದ್ದಾರೆ. ಟೈಮ್ಸ್ (TIME) ನಿಯತಕಾಲಿಕೆ 2019ರಲ್ಲಿ ಪ್ರಕಟಿಸಿದ 100 ಮಂದಿ ಪ್ರಭಾವಿಗಳ ಪಟ್ಟಿಯಲ್ಲಿ ಮೇನಕಾ ಗುರುಸ್ವಾಮಿ ಅವರ ಹೆಸರನ್ನೂ ಸೇರಿಸಿತ್ತು.

ಮೇನಕಾ ತಮ್ಮ ವಕೀಲಿಕೆಯನ್ನು ಸಂಘರ್ಷಾತ್ಮಕವಾಗಿಯೇ ನಡೆಸುತ್ತಿದ್ದಾರೆ. ಅತಿಸೂಕ್ಷ್ಮ ಮತ್ತು ಪ್ರಭಾವಿ ರಾಜಕಾರಣಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನೂ ನಡೆಸಿದ್ದಾರೆ. 2024ರಲ್ಲಿ ಕೋಲ್ಕತ್ತದ ಸರ್ಕಾರಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನ ವೈದ್ಯೆ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಂತ್ರಸ್ತೆಯ (ರಾಜ್ಯ ಸರ್ಕಾರದ ಪರ) ಪರವಾಗಿ ವಾದ ಮಂಡಿಸಿದ ವಕೀಲರ ತಂಡದಲ್ಲಿ ಮೇನಕಾ ಕೂಡ ಒಬ್ಬರಾಗಿದ್ದರು.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಜಾರಿ ನಿರ್ದೇಶನಾಲಯದ (ಇಡಿ) ನಡುವಿನ ವಿವಾದಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪರವಾಗಿ ಮೇನಕಾ ಕೋಲ್ಕತ್ತಾ ಹೈಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು. ಬಡ ಹಾಗೂ ಮಧ್ಯಮ ವರ್ಗದ ಕುಟುಂಬದ ಮಕ್ಕಳಿಗೆ RTE (Right to Education) ಖಾಸಗಿ ಶಾಲೆಯಲ್ಲಿ ಶೇ. 25ರಷ್ಟು ಸ್ಥಾನಗಳನ್ನು ಕಾಯ್ದಿರಿಸಬೇಕು ಎನ್ನುವ ವಾದವೂ ಸೇರಿದಂತೆ ಅನೇಕ ಸಂವಿಧಾನಾತ್ಮಕ ವಿಷಯಗಳ ಬಗ್ಗೆ ವಕಾಲತ್ತು ಮಾಡಿದ್ದಾರೆ.

ಸ್ಥಳೀಯ ಸಂಸ್ಥೆಯಂತೆ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಮಹಿಳಾ ಮೀಸಲನ್ನು ಜಾರಿಗೊಳಿಸಲು ಇನ್ನೂ ಸಾಧ್ಯವಾಗಿಲ್ಲ. ಮಹಿಳಾ ಮೀಸಲು ಹಕ್ಕೊತ್ತಾಯ 1957ರಿಂದಲೂ ಸಂಸತ್ತಿನಲ್ಲಿ ಮಂಡನೆಯಾಗುತ್ತಿದೆ. 1996ರಲ್ಲಿ ಮಹಿಳಾ ಮೀಸಲಿಗೆ ಸಂಬಂಧಿಸಿದ ಮಸೂದೆ ಮೂರು ದಶಕಗಳ ಕಾಲ ನನೆಗುದಿಗೆ ಬಿದ್ದಿತ್ತು. ಇತ್ತೀಚೆಗಷ್ಟೇ ಸಂಸತ್ತು ಆ ಮಸೂದೆಯನ್ನು ಅಂಗೀಕರಿಸಿದ್ದು, ಶಾಸನ ಅನುಷ್ಠಾನ ಬಾಕಿ ಉಳಿದಿದೆ. ಮಹಿಳಾ ಮೀಸಲು ಜಾರಿಗೊಳಿಸುವ ಮೂಲಕ ಸಂವಿಧಾನ ನಿರ್ದೇಶಿಸುವ ವ್ಯಕ್ತಿ (ಲಿಂಗ ಸೂಚಕವಲ್ಲ) ಹಕ್ಕಿಗೆ ಮನ್ನಣೆ ಸಿಕ್ಕಂತೆ ಆಗುತ್ತದೆ. ವ್ಯಕ್ತಿ ಪರಿಸರದ ಕೂಸು. ಆ ವ್ಯಕ್ತಿಗೆ ಎಲ್ಲ ರೀತಿಯಿಂದಲೂ ಸಮಾನ ಹಕ್ಕು ದಕ್ಕಬೇಕು ಎನ್ನುವ ವಾದಕ್ಕೆ ಮನ್ನಣೆ ಸಿಗಬೇಕಿದೆ. 'ವಯಸ್ಕರ ಸಹಮತದ ಸಲಿಂಗ ಸಂಬಂಧ' ಅಪರಾಧ ಅಲ್ಲ, ಎನ್ನುವ ನ್ಯಾಯಾಲಯದ ಘೋಷಣೆಗೆ ಮೇನಕಾ ಒತ್ತಾಸೆಯ ಕಾಳಜಿ ಪ್ರಮುಖ ಕಾರಣವಾಗಿತ್ತು. ಈಗ ಅವರು ಲಿಂಗತ್ವ ಅಲ್ಪಸಂಖ್ಯಾತರ ಬೇಡಿಕೆಯ ಜೊತೆಗೆ ಮಹಿಳಾ ರಾಜಕೀಯ ಪ್ರಾತಿನಿಧ್ಯಕ್ಕೂ ದನಿಯಾಗಬಹುದು.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65